ಲೇಖನ 04

# ವನಸಿರಿಯ ಅಪ್ಸರೆ ಘಮಘಮಿಸುವ ಕಾಡು ಮಲ್ಲಿಗೆ ಮಹಾವಿಷ್ಣು ಪೂಜಾ ಪುಷ್ಪ ಮಾಲತಿ

"ಕಾಡು ಮಲ್ಲಿಗೆಯ ಒಡಲಲ್ಲಿ ಹಾಡು ಹಕ್ಕಿಯ ಹನಿಯಲ್ಲಿ. ನನ್ನ ದೇವನ ಕಾಣುವೆನು ಬೆಳ್ಳಿಚುಕ್ಕಿಯ ನಗೆಯಲ್ಲಿ ಹಳ್ಳಕೊಳ್ಳದ ಅಲೆಯಲ್ಲಿ ನನ್ನ ದೇವನ ಕಾಣುವೆನು" ಕಾಡುಮಲ್ಲಿಗೆಯ ಪರಿಮಳಕೆ ಮನಸೋತು ಕವಿ ದೊಡ್ಡರಂಗೇಗೌಡ ಬರೆದಿರುವ ಕವನ. ಪ್ರಕೃತಿಯ ಮಡಿಲಲ್ಲಿ ಅರಳುವ ಪುಷ್ಪರಾಶಿಗಳಲ್ಲಿ ಕಾಡು ಮಲ್ಲಿಗೆಯದು ಒಂದು ವಿಶಿಷ್ಟ ಸ್ಥಾನ. ಮಂಜಿನ ಹನಿಗಳಂತೆ ಬಿಳಿಯಾದ ದಳಗಳು. ಮತ್ತು ಹಚ್ಚ ಹಸಿರಿನ ನಡುವೆ ನಕ್ಷತ್ರಗಳಂತೆ ಹೊಳೆಯುವ ಮಾಲತಿ ಪುಷ್ಪವು ಕೇವಲ ಹೂವಲ್ಲ, ಅದು ಪ್ರಕೃತಿಯು ನಮಗೆ ನೀಡಿದ ಅಮೂಲ್ಯ ಉಡುಗೊರೆ. ಪಶ್ಚಿಮ ಘಟ್ಟಗಳ ಬೆಟ್ಟಗುಡ್ಡಗಳಲ್ಲಿ ತನ್ನದೇಆದ ಸೊಬಗಿನಿಂದ ಕಂಗೊಳಿಸುವ ನವಮಲ್ಲಿಕಾ ಹೆಸರಿನಲ್ಲಿ ಈ ವನ್ಯ ಮಲ್ಲಿಗೆಯ ಪರಿಮಳವು ಮನಸ್ಸಿಗೆ ಮುದ ನೀಡುವ ಪರಿಯೇ ಅನನ್ಯ. ತನ್ನ ಬಿಳಿ ಬಣ್ಣದ ಶುಭ್ರತೆ ಮತ್ತು ಮನಸೆಳೆಯುವ ಸುಗಂಧದಿಂದ ವನರಾಣಿ ಎಂದೇ ಕರೆಸಿಕೊಳ್ಳುವ ಮಾಲತಿ ಪುಷ್ಪವು ಪ್ರಕೃತಿಯ ಸೌಂದರ್ಯದ ಸಂಕೇತ. ವನವಿಹಾರಿಗಳ ಮನಸ್ಸಿಗೆ ಸಂತಸ ನೀಡುವ ಮಾಲತಿ ಪುಷ್ಪ ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಅಳಿಸಲಾಗದ ಛಾಪು ಮೂಡಿಸಿದೆ. ಚರಕ ಸಂಹಿತೆ, ಬೃಹತ್ ಸಂಹಿತೆ ಮೊದಲಾದ ಪ್ರಾಚೀನಗಳಲ್ಲಿ ಹೊಗಳಿಸಕೊಂಡ ನಾಡಿನ ಪುಷ್ಪ ಮಾಲಿಕೆಯ ರತ್ನವಿದು.



ಚಿತ್ರ ಕೃಪೆ:ವಿಜಯ ಹಳಕಟ್ಟಿ

ಸಸ್ಯ ಶಾಸ್ತ್ರೀಯ ವನದಲ್ಲೂ ಪ್ರತ್ಯಕ್ಷವಾಗುವ ಜಲ ಸೂಚಕ ಸಸ್ಯವಿದು. ಸನಾತನ ಸಂಸ್ಕೃತಿಯ ವೈಶಿಷ್ಟ್ಯಪೂರ್ಣ ವ್ರತಾಚರಣೆಯ ಅರ್ಚನೆಯ ಪುಷ್ಪ. ವನಸಿರಿಯ ಅಪ್ಸರೆ ಘಮಘಮಿಸುವ ಮಹಾವಿಷ್ಣು ಪೂಜಾ ಪುಷ್ಪ ಮಾಲತಿ.

ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಹೇರಳವಾಗಿ ಕಂಡು ಬರುವ ಕಾಡುಮಲ್ಲಿಗೆಗೆ ಭಾರತ ಮತ್ತು ಶ್ರೀಲಂಕಾ ತವರೂರು. ಆಯುರ್ವೇದ ಹಾಗೂ ಮನೆಮದ್ದುಗಳಲ್ಲಿ ಬಳಕೆಯಾಗುವ ಸಸ್ಯದ ನಾಮವಿಶೇಷ ಅರಿಯೋಣ. ಮಾಲತಿಯು ಒಲಿಯೇಸಿ ಸಸ್ಯ ಕುಟುಂಬದ ಸದಸ್ಯ, ವೈಜ್ಞಾನಿಕ ಹೆಸರು ಜಾಸ್ಮಿನಂ ಮಲಬಾರಿಕಂ (ಜಾಸ್ಮಿನಂ ಅಂಗುಷ್ಟಿಫೋಲಿಯ) ಕಾಡುಮಲ್ಲಿಗೆಯನ್ನು ಮೊದಲಬಾರಿಗೆ ಕೇರಳದ ಮಲಬಾರ ಪ್ರದೇಶದಿಂದ ಸಸ್ಯ ಜಗತ್ತಿಗೆ ಪರಿಚಯಿಸಿದರ

ಪರಿಣಾಮ ಮಲಬಾರಿಕಂ ಎಂಬ ಪ್ರಭೇದ ಸೂಚಕ ಹೆಸರನ್ನು ರಾಬರ್ಟವೈಟ್ ಎಂಬುವರು ನಾಮಕರಣ ಮಾಡಿದ್ದಾರೆ. ಕನ್ನಡದಲ್ಲಿ ಕಾಡು ಮಲ್ಲಿಗೆ, ಕಣ್ಣುಕೋಟಲೆ ಗಿಡ ಎಂಬ ನಾಮಹೊಂದಿದೆ. ತಮಿಳಿನಲ್ಲಿ ಮುಲ್ಲೈ, ಇಂಗ್ಲಿಷಿನಲ್ಲಿ ಮಲಬಾರ್ ಜಾಸ್ಮಿನ್, ಸಂಸ್ಕೃತದಲ್ಲಿ ಮುದ್ಗಾರ. ಮೋಗರಾ, ಮಾಲತಿ, ನವಮಾಲಿಕಾ, ಯೂಥಿಕಾ, ಗಣಕಿ, ಅಂಬಷ್ಠಾ.ಸುಮನಾ ಎಂಬ ನಾಮಧೇಯ ಪಡೆದಿದೆ.

ಭಾರತೀಯ ಹಬ್ಬ ಹರಿದಿನಗಳಲ್ಲಿ ಆಯಾ ಋತುಮಾನಕ್ಕೆ ಅನುಗುಣವಾಗಿ ಸಸ್ಯಗಳ ಪುಷ್ಪ ಮತ್ತು ಎಲೆ(ಪತ್ರ)ದಿಂದ ಅರ್ಚಿಸುವ ವಿಧಾನವನ್ನು ನಮ್ಮ ಹಿರಿಯರು ಜೋಡಿಸಿದ್ದಾರೆ. ಅಂತೇಯೆ ಸಂಕಷ್ಟ ಚತುರ್ಥಿ, ಮಹಾವಿಷ್ಣು ಪೂಜಾ, ತುಳಸಿವಿವಾಹ, ಲಕ್ಷ್ಮೀಪೂಜಾ, ಅನಂತಚತುರ್ದಶಿ. ಶನಿಕಥಾ ವ್ರತ, ನೀರಶನಾರ್ಕವಾರವ್ರತ, ಋಷಿಪಂಚಮಿ ವ್ರತ, ಉಮಾಮಹೇಶ್ವರ ವ್ರತ, ನೃಸಿಂಹ ಜಯಂತಿ, ಅನಂತ ಪದ್ಮನಾಭ ವ್ರತ, ಧನ್ವಂತರಿ ಪೂಜಾ. ಸತ್ಯಗಣಪತಿ ವ್ರತದ ಅರ್ಚನೆಯಲ್ಲಿ ಮಾಲತಿಪುಷ್ಪವನ್ನು ಅರ್ಪಿಸುವ ಕುರಿತು ಪ್ರಾಚೀನ ಧಾರ್ಮಿಕ ಗ್ರಂಥಗಳು ತಿಳಿಸಿದೆ. ಸಸ್ಯ ಶಾಸ್ತ್ರೀಯ ವನ ವನಗಳಾದ ನರಸಿಂಹ ವನ ಮತ್ತು ಸಪ್ತ ಋಷಿವನದಲ್ಲಿ ಜಮದಗ್ನಿ ಋಷಿಯ ಪ್ರತಿನಿಧಿಯಾಗಿ ವೃಕ್ಷಾರೋಪಣ ಮಾಡಬೇಕೆಂದು ವಾಸ್ತು ಅ'ಮರ'ತಂತ್ರ ಗ್ರಂಥದಲ್ಲಿ ಉಲ್ಲೇಖವಿದೆ. "ಕುಸುಮಂ ಯೂಥಿಕಾ ದ್ವೇ ಚ ತತಾ ಚೈವಾತಿಮುಕ್ತಕಂ /ಏಮಾದಿನೀ ಪುಷ್ಪಾಣಿದಾತವ್ಯಾನೀ ಸದಾ ಹರೇ ನೆಲದಾವರೆ. ಕಾಡುಮಲ್ಲಿಗೆ ಮಾಧವಿ, ಪುಷ್ಪಗಳನ್ನು ಶ್ರೀಹರಿಗೆ ಸದಾ ಅರ್ಪಿಸಬಹುದು."

ಬಾಣಂ ಚ ಚಂಪಕಾಶೋಕಂ ಕರವೀರಂ ಚ ಯೂಥಿಕಾ ಪ್ರಶಸ್ತ್ಯಾನ್ಯ ಸುರಶ್ರೇಷ್ಠ ಶಂಕರಾರಾಧನೆಪಿ ಹಿ" ಶ್ರೀ ಹರಿಯ ಮತ್ತು ಶಿವಶಂಕರನ ಪೂಜೆಯಲ್ಲಿ ಅರ್ಪಿಸುವ ಪುಷ್ಪಗಳಲ್ಲಿ ಕಾಡುಮಲ್ಲಿಗೆ (ಮಾಲತಿ)ಯೂ ಪ್ರಮುಖವಾದದ್ದು. ವರಾಮಿಹಿರರ ಬೃಹತ್ ಸಂಹಿತೆಯ ದಕಾರ್ಗಲ ಅಧ್ಯಾಯದಲ್ಲಿ ಕಾಡು ಮಲ್ಲಿಗೆಯು ಒಂದು ಜಲಸೂಚಕ ಸಸ್ಯವೆಂದು ವರ್ಣಿಸಿದೆ. "ಭಾರಂಗಿ ತ್ರಿವೃತಾ ದಂತೀ ಶೂಕರಪಾದಿ ಚ ಲಕ್ಷ್ಮಣಾ ಚೈವ/ ನವಮಾಲಿಕಾ ಚ ಹಸ್ತದ್ವಯೇಂಬು ಯಾಮ್ಯೇ ತ್ರಿಭಿ: ಪುರುಷೈ: ಭಾರಂಗಿ ತ್ರಿವೃತ್ ನಾಗದಂತಿ ಶೂಕರಪಾದಿ. ಲಕ್ಷ್ಮಣಾ ಮತ್ತು ನವಮಾಲಿಕಾ(ಕಾಡುಮಲ್ಲಿಗೆ) ಬಳ್ಳಿಗಳು ಬೆಳೆಯುತ್ತವೆಯೋ ಅಲ್ಲಿ 3 ಅಡಿ ದಕ್ಷಿಣಕ್ಕೆ 18 ಆಳದಲ್ಲಿ ನೀರು ದೊರೆಯುತ್ತದೆ. ಅಮರಕೋಶದಲ್ಲಿ ಮಾಲತಿಯ ಪರ್ಯಾಯ ನಾಮಗಳು * ಮಾಗಧಿ ಗಣಿಕಾ ಯೂಥಿಕಾಂಬಷ್ಠಾ ಹೇಮಪುಷ್ಟಿಕಾ/ಸುಮನಾ ಮಾಲತೀ ಜಾತಿ: ಸಪ್ತಲಾ ನವಮಾಲಿಕಾ" ಮಗಧ ದೇಶದಲ್ಲಿ ಪ್ರಚುರವಾಗದ ಗಿಡವಾಗಿದ್ದರಿಂದ ಮಾಗಡಿಯೆಂದು, ಯೂಥೋಜಾಲಮಸ್ಯಾ ಇತಿಯೂಥಿಕಾ ಅಂದರೆ ಗುಂಪಾಗಿ ಬೆಳೆಯುವದು, ಅಂಬ ಎಂದರೆ ಭ್ರಮರಾಣಾಂ ಧ್ವನಿ: ಈ ಸದಾ ಭ್ರಮರಗಳ ನಿನಾದ ಇರುವದರಿಂದ ಅಂಬಷ್ಠ ಎಂದು, ಗಣಿಕಾಚಿತ್ತಾಕರ್ಷಕ ವೇಶ್ಯೆಯಂತೆ ಮನಸೆಳೆಯುವ ಗುಣಹೊಂದಿದೆ ಅದಕ್ಕೆ ಗಣಿಕಾಯೆಂದು ಪರ್ಯಾಯ ನಾಮಗಳು.

ಕನಕದಾಸರ ಮೋಹನ ತರಂಗಿಣಿಯಲ್ಲಿ "ಪಾದರಿ ಕಾಡುಮಲ್ಲಿಗೆ ಮೊಲ್ಲೆ ಹೊಂಬಣ್ಣ ಕೇದಗೆಯಲ್ಲ ಹೂವುಗಳ ಸ್ವಾದ ಸೋರುವ ಜೇಂಗೊಡನ ಸದ್ದಟರು ವಿನೋದದೆ ತಂದರಾಳನಿಗೆ" ರಾಮನು ಕಿಷ್ಕಿಂದಾ ಕಾಂಡದಲ್ಲಿ ಋತುಮಾನಗಳ ವರ್ಣನೆ ಮಾಡುವಾಗ ಮತ್ತು ಪಂಪಾ ಸರೋವರದ ಬಣ್ಣಿಸುವಾಗ ಮಾಲತೀ ಕುಂದ ಗುಲ್ಮಾಶ್ಚ ಸಿಂಧುವಾರಾಷ್ಟ ಪುಷ್ಪಿತಾ: ನಂದಿವರ್ಧನಾಶ್ಚಾಪಿ ಶೋಭಂತೇ ತತ್ರ ತತ್ರ ಹ//" ಪಂಪಾ ಸರೋವರದ ತೀರದಲ್ಲಿ ಮಾಲತಿ (ಕಾಡುಮಲ್ಲಿಗೆ) ಕುಂದ ಮಲ್ಲಿಗೆ, ಲಕ್ಕಿ ಗಿಡ ಮತ್ತು ನಂದಿಬಟ್ಟಲು ಗಿಡಗಳು ಹೂವುಗಳಿಂದ ತುಂಬಿ ತುಳುಕುತ್ತಾ ಅಲ್ಲಿ ಶೋಭಿಸುತ್ತಿವೆ. ವೈಷ್ಣವ ಪುರಾಣಗಳಲ್ಲಿ ವೃಂದಾವನವು ಮಾಲತಿ ಮತ್ತು ಮಲ್ಲಿಗೆ ಬಳ್ಳಿಗಳಿಂದ ಕಂಗೊಳಿಸುತ್ತಿತ್ತು. ರಾಧೆಯು ಕೃಷ್ಣನ ಬರುವಿಕೆಗಾಗಿ ಸುಂದರ ಸುಗಂಧ ಮಾಲತಿ ಹೂವುಗಳ ಮಾಲೆಯನ್ನು ಧರಿಸುತ್ತಿದ್ದಳು ಅಲ್ಲದೇ ಮಾಲತಿ ಬಳ್ಳಿಗಳ ಮರೆಯಲ್ಲಿ ಕುಳಿತು ಕೃಷ್ಣನಿಗಾಗಿ ಕಾಯುತ್ತಿದ್ದಳು ಎಂಬ ವರ್ಣನೆಯಿದೆ. "ಹಸಿವು ನೀಗಿಸಲು ಬೇರೆ ದಾರಿಯೇ ಇಲ್ಲವೆನ್ನುವ ಕಾಲದಲ್ಲಿ ಕಾಡುಮಲ್ಲಿಗೆಯ ಕಹಿ ತುಂಬಿದ ಹಣ್ಣುಗಳನ್ನು ಕೊಯ್ದು ಬಟ್ಟೆಯಲ್ಲಿ ಕಟ್ಟಿ ನೀರಿನಲ್ಲಿಟ್ಟು ದಿನಾ ನೀರು ಬದಲಾಯಿಸುತ್ತಾ ಕಹಿತಗ್ಗಿಸಿ ಉಪ್ಪು ಹಾಕಿ ಬೇಯಿಸಿ ತಿನ್ನುತ್ತಿದ್ದರೆಂದರೆ ಇಂದು ಊಹಿಸಲಾದರೂ ಸಾಧ್ಯವೇ? ನಂಬಲೇ ಬೇಕು ಫಾಸ್ಟಫುಡ್ ಯುಗದಲ್ಲಿ ನಾವಿರುವಾಗ ಹಿರಿಯರು ಪಟ್ಟಿದ್ದ ಕಷ್ಟದ ಬಗ್ಗೆಯೂ ಅರಿವಿರಬೇಕಲ್ಲವೇ ಇದು ವಿಜಯಾ ಶೆಟ್ಟಿ ಸಾಲೆತ್ತೂರು ಅವರು ಇ ಪೇಪರ್ ಗೋಡೆಯಲ್ಲಿ ಬರೆದಿರುವ ಲೇಖನದಲ್ಲಿನ ಮಾಹಿತಿ.

ಸಸ್ಯದ ಎಲೆಯು ಆಸ್ಕೋರ್ಬಿಕ್ ಆಮ್ಲ, ಗ್ಲುಕೋಸೈಡ್ ಎಂಬ ರಾಸಾಯನಿಕ ಘಟಕಗಳನ್ನು ಹೊಂದಿದೆ. ಕಣ್ಣಿನಪೊರೆ ಮತ್ತು ಸೊಂಕಿನ ಚಿಕಿತ್ಸೆಗೆ. ಗಾಯದ ಚಿಕಿತ್ಸೆಗೆ ಹುಳುಕಡ್ಡಿ ಚಿಕಿತ್ಸೆ, ಚರ್ಮರೋಗ, ಮೂತ್ರ ವಿಸರ್ಜನೆಯ ತೊಂದರೆ, ಕಿವಿ ನೋವುಗಳಿಗೆ ಔಷಧವಾಗಿ ಬಳಕೆಯಿದೆ. ಕಾಂಡ ಎಲೆ, ಬೇರು ಔಷಧಿಯ ಭಾಗಗಳಾಗಿದೆ. ಕಲ್ಯಾಣಕ ಕಷಾಯ ಚೂರ್ಣ, ಮಾಲತ್ಯಾದಿ ತೈಲ, ಟ್ರೈಕೊಡರ್ಮಾ ಮುಲಾಮು, ವಸಂತ ಕುಸುಮಾಕರ ರಸ ಮಾಲತಿಯುಕ್ತ ಆಯುರ್ವೇದ ಔಷಧಗಳು. "ಮಾಲತಿ ತುವರಾ ತಿಕ್ತಾ ಕಟೂಷ್ಣ ದೋಷನಾಶಿನಿ/ಶಿರೋಕ್ಷಿಮುಖದಂತಾತಿವಿಷ ಕುಷ್ಠವೃಣಾಶ್ರಿಜಿತ್// ಇದು ಕೈಯದೇವ ನಿಘಂಟುವಿನಲ್ಲಿನ ಮಾಹಿತಿ. ಇದಲ್ಲದೇ ಚರಕ ಸಂಹಿತೆ, ಧನ್ವಂತರಿ ನಿಘಂಟು, ಭಾವಪ್ರಕಾಶ ನಿಘಂಟು. ಮಾಲತಿ ಗುಣ ವಿಶೇಷಗಳನ್ನು ದಾಖಲಿಸಿದೆ. ಬೀಜಗಳಿಂದ ಹೊಸ ಗಿಡಗಳಿಂದ ಮತ್ತು ಗಿಡದ ಬಳಿ ಹುಟ್ಟುವ ಮರಿಗಳನ್ನು ತಂದು ಬೆಳೆಸಬಹುದಾಗಿದೆ. ಮಾಲತಿ ಪುಷ್ಪವು ಜೇನುನೊಣಗಳು ಚಿಟ್ಟೆಗಳು ಮತ್ತು ಇತರೆ ಪರಾಗಸ್ಪರ್ಶ ಕೀಟಗಳನ್ನು ಆಕರ್ಷಿಸಿ ಪ್ರಕೃತಿಯ ಆಹಾರ ಸರಪಳಿಯನ್ನು ಕಾಪಾಡುವದರ ಜೊತೆಗೆ ಸಸ್ಯಗಳ ಸಂತಾನೋತ್ಪತ್ತಿಗೆ ಸಹಾಯದ ಮೂಲಕ ಜೀವ ವೈವಿಧ್ಯ ರಕ್ಷಣೆಯ ಕಾವಲುಗಾರನಂತೆ ನಿಂತಿದೆ. ಮಣ್ಣಿನ ಸವಕಳಿ ತಡೆ, ಗಾಳಿಯ ಶುದ್ದೀಕರಣದೊಂದಿಗೆ ವಾಯುಮಾಲಿನ್ಯ ನಿಯಂತ್ರಣ ಪರಿಸರ ಸಂರಕ್ಷಣೆಗೆ ತನ್ನ ಕೊಡುಗೆ ನೀಡುತ್ತದೆ.

ಓ ಕಾಡು ಮಲ್ಲಿಗೆಯೇ ನಿನ್ನ ಸುವಾಸನೆಯ ಸೊಬಗಿಗೆ ಮನವಿದೇಯೇ ಧರೆಯಲಿ, ಯಾಂತ್ರಿಕ ಜಗತ್ತಿನಲ್ಲಿ ಇಂಥಹ ದೇಸಿ ಹೂವುಗಳ ಸಂರಕ್ಷಣೆ ನಮ್ಮ ಮುಂದಿರುವ ಬಹುದೊಡ್ಡ ಸವಾಲು ಮತ್ತು ಜವಾಬ್ದಾರಿ. ಮಾಲತಿಯಂತಹ ನೈಸರ್ಗಿಕ ಸಂಪತ್ತುನ್ನು ಉಳಿಸಿಕೊಳ್ಳುವದು ಎಂದರೆ ಅದು ಕೇವಲ ಒಂದು ಗಿಡವನ್ನು ಉಳಿಸುವದಲ್ಲ. ಬದಲಿಗೆ ನಮ್ಮ ಸಂಸ್ಕೃತಿ ಪರಂಪರೆ ಮತ್ತು ಆರೋಗ್ಯಕರ ಪರಿಸರವನ್ನು ಮುಂದಿನ ಪೀಳೀಗೆಗೆ ಉಡುಗೊರೆಯಾಗಿ ನೀಡುವದಾಗಿದೆ. ಇಡೀ ಪರಿಸರಕ್ಕೆ ಚೈತನ್ಯ ನೀಡುವ ಸರಳತೆಯಲ್ಲಿ ಸೌಂದರ್ಯವಿದೆ ಎಂಬ ಸತ್ಯವನ್ನು ನಮಗೆ ಸಾರುವ ಮಾಲತಿ ಪುಷ್ಪವನ್ನು ಸಂರಕ್ಷಿಸೋಣ.

::::::::::::::::::::::::::::::::::::::::::::::::::::

**ಉಮಾಪತಿ ಭಟ್ಟ ಕೆ ವಿ**
ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು
ಸಮಗ್ರ ವಿಕಾಸ ಟ್ರಸ್ಟ್, ಶಿರಸಿ